# ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
# Karnataka Neeravari Nigam Limited
(A Government of Karnataka Enterprise)

ಕನೀನಿ/ವ್ಯನಿ/2016-17/ 8030

ದಿನಾಂಕ : 25.01.2017

ಮುಖ್ಯ ಆಡಳಿತಾಧಿಕಾರಿಗಳು
ಮತ್ತು ಮುಖ್ಯ ಲೆಕ್ಕಾಧಿಕಾರಿಗಳು
ಕರ್ನಾಟಕ ನೀರಾವರಿ ನಿಗಮ ನಿಯಮಿತ
ಧಾರವಾಡ್.

ಮಾನ್ಯರೆ,

**ವಿಷಯ : ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನ ಹೊಳೆ, ಗಾಯತ್ರಿ ಮತ್ತಿ ವಾಣಿ ವಿಲಾಸ ಸಾಗರ ಯೋಜನೆಗಳಿಗೆ ಸಂಭಂದಿಸಿದ ಲೆಕ್ಕಪತ್ರ ಮತ್ತು ಆಡಳಿತ ಎಲ್ಲಾ ದಾಖಲೆಗಳನ್ನು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಕೇಂದ್ರ ಕಛೇರಿ ಚಿತ್ರದುರ್ಗಗೆ ಹಸ್ತಾಂತರಿಸುವ ಬಗ್ಗೆ.**

**ಉಲ್ಲೇಖ:** 1. ಸರ್ಕಾರದ ಆದೇಶ ಸಂ. ಜಸಂ/35/ವಿಬ್ಯಾಇ/2016/ಬೆಂಗಳೂರು 20.08.2016.
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 130 ವಿಬ್ಯಾಇ 2016, ದಿ: 18.11.2016.
3. ದಿನಾಂಕ: 14.12.2016ರಂದು ನಡೆದ ನಿಗಮದ 75ನೇ ಮಂಡಳಿ ಸಭೆಯ ನಡಾವಳಿ.
4. ಕನೀನಿ/ಕೇಕ/ಸಿ-9/342/ಎಎಸ್‌ಟಿ/2016/5938, ದಿನಾಂಕ: 20.12.2016.
5. ವಿಶೇಷಾಧಿಕಾರಿಗಳು, ವಿನೀನಿನಿರವರ ಪತ್ರ ಸಂಖ್ಯೆ:ವಿನೀನಿ/ಕೇಂಕ-ಚಿತ್ರದುರ್ಗ/2016-17/ ದಿ:24.1.17

*********

ಸರ್ಕಾರದ ಮತ್ತು ನಿಗಮಗಳ ಉಲ್ಲೇಖಿತ ಆದೇಶಗಳಲ್ಲಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವನ್ನು ರಚಿಸಿ, ಅನುಷ್ಠಾನಗೊಳ್ಳಬೇಕಾದ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನ ಹೊಳೆ, ಗಾಯತ್ರಿ ಮತ್ತಿ ವಾಣಿ ವಿಲಾಸ ಸಾಗರ ಯೋಜನೆಗಳನ್ನು ಹಾಗೂ ಅದಕ್ಕೆ ಸಂಭಂಧಿಸಿದ ಕಛೇರಿ, ಸಿಬ್ಬಂದಿ ಸಮೇತ ಎನ್‌ಬ್ಲಾಕ್ ಆಗಿ ಅಡಳಿತಾತ್ಮಕ ಅನುಮೋದನೆ ನೀಡಿ ವರ್ಗಾಯಿಸಲಾಗಿದೆ ಮತ್ತು ಉಲ್ಲೇಖ (4) ರಲ್ಲಿ ಕರ್ನಾಟಕ ನೀರಾವರಿ ನಿಗಮವು ತನ್ನ ಅಧಿಕೃತ ಜ್ಞಾಪನ ಪತ್ರದನ್ವಯ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಮತ್ತು ಚಾಲ್ತಿಯಲ್ಲಿರುವಂತಹ ಇತರೇ ಯೋಜನೆಗಳಾದ ವಿ.ವಿ ಸಾಗರ ಹಾಗೂ ಗಾಯತ್ರಿ ಯೋಜನೆಗಳನ್ನು ಹಾಗೂ ಅದಕ್ಕೆ ಸಂಭಂಧಿಸಿದ ಕಛೇರಿ, ಸಿಬ್ಬಂದಿ ಸಮೇತ ಎನ್‌ಬ್ಲಾಕ್ ಆಗಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಆಡಳಿತ ವ್ಯಾಪ್ತಿಯಲ್ಲಿ ಸದರಿ ಯೋಜನೆಗಳನ್ನು ಅನುಷ್ಟಾನಗೊಳಿಸಲು ವರ್ಗಾಯಿಸಲು ಈಗಾಗಲೇ ಆದೇಶಿಸಲಾಗಿದೆ.

ವಿಶೇಷಾಧಿಕಾರಿಗಳು ಉಲ್ಲೇಖಿತ ತಮ್ಮ ಪತ್ರ (5) ರಲ್ಲಿ ವಿಜನಿಯ ಎಲ್ಲಾ ಕಛೇರಿಗಳು ದಿನಾಂಕ 01.01.2017 ರಿಂದ ಜಾರಿಗೆ ಬರುವಂತೆ ಈಗಾಗಲೇ ಕಾರ್ಯಾರಂಭ ಮಾಡಿರುವುದಾಗಿ ವರದಿಸಿರುತ್ತಾರೆ. ಆದ್ದರಿಂದ ವಿಜೆಎನ್‌ಎಲ್‌ನ ಕೇಂದ್ರ ಕಛೇರಿಯು ಸುಗಮವಾಗಿ ನಡೆಯಲು ಸದರಿ 4 ಯೋಜನೆಗಳಿಗೆ ಸಂಭಂದಿಸಿದ ಲೆಕ್ಕಪತ್ರ, ಆಡಳಿತ, ಹಣಕಾಸು, ಸಿಬ್ಬಂದಿ, ಕಾನೂನು, ತಾಂತ್ರಿಕ, ಟಾಕ್ಸೆಸ್ ವಿಷಯಗಳು ಮತ್ತು ಭೂಸ್ವಾಧೀನಗಳ ವಿಷಯಗಳ ದಾಖಲೆಗಳನ್ನು ವ್ಯವಸ್ಥತವಾಗಿ ವರ್ಗಿಕರಿಸಿ ಮತ್ತು ಎಲ್ಲಾ ದಾಖಲೆಗಳನ್ನು ದಿ:31.12.16 ರವರೆಗೆ ಅಪೆಡೇಟ್ ಮಾಡಿಸಿ ಸಂಭಂದಿಸಿದ ಯೋಜನೆಗಳ ಎಲ್ಲಾ ದಾಖಲೆಗಳನ್ನು ದೃಡೀಕರಣದೊಂದಿಗೆ ದಿ: 31.01.2017 ರೊಳಗೆ ವರ್ಗಾಯಿಸಲು ಸಂಭದಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

ವಿಶೇಷಾಧಿಕಾರಿಗಳು, ವಿಜನೀನಿ ರವರ ಕೋರಿರುವಂತೆ **ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನ ಹೊಳೆ, ಗಾಯತ್ರಿ ಮತ್ತಿ ವಾಣಿ ವಿಲಾಸ ಸಾಗರ ಯೋಜನೆಗಳಿಗೆ ಸಂಭಂದಿಸಿದ ಲೆಕ್ಕಪತ್ರ, ಆಡಳಿತ, ಹಣಕಾಸು, ಸಿಬ್ಬಂದಿ, ಕಾನೂನು, ತಾಂತ್ರಿಕ, ಟಾಕ್ಸೆಸ್ ವಿಷಯಗಳು, ಭೂಸ್ವಾಧೀನ ಮತ್ತು** ಇನ್ನಿತರ

ವಿಷಯಗಳ ಎಲ್ಲಾ ದಾಖಲಗೆಳನ್ನು ವ್ಯವಸ್ಥತವಾಗಿ ವರ್ಗೀಕರಿಸಿ ಮತ್ತು ಎಲ್ಲಾ ದಾಖಲೆಗಳನ್ನು ದಿ:31.12.16 ರವರೆಗೆ ಅಪ್‌ಡೇಟ್ ಮಾಡಿಸಿ ಸಂಭಂದಿಸಿದ ಯೋಜನೆಗಳ ಎಲ್ಲಾ ದಾಖಲೆಗಳನ್ನು ದೃಢೀಕರಣದೊಂದಿಗೆ ದಿ: 31.01.2017 ರೊಳಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಕೇಂದ್ರ ಕಛೇರಿ ಚಿತ್ರದುರ್ಗಗೆ ವರ್ಗಾಯಿಸಲು ಕ್ರಮಜರುಗಿಸಲು ಸೂಚಿಸಿದೆ. ಸದರಿ ಎಲ್ಲಾ ದಾಖಲೆಗಳನ್ನು ವಿಜೆಎನ್‌ಎಲ್‌ನ ಮುಖ್ಯ ಆಡಳಿತಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಸ್ತಾಂತರಿಸಿ ಸ್ವೀಕೃತಿ ಪತ್ರವನ್ನು ಪಡೆದು ಈ ಕಛೇರಿಗೆ ವರದಿ ನೀಡಲು ಸೂಚಿಸಿದೆ.

ಸದರಿ ವಿಷಯದ ಬಗ್ಗೆ ಸಂಭಂಧಿಸಿದ ಅಧಿಕಾರಿ/ಸಿಬ್ಬಂದಿಗಳು ಕೊಡಲೆ ಕ್ರಮ ಜರುಗಿಸಲು ಆದೇಶಿಸಿದೆ.

(ಆರ್. ರುದ್ರಯ್ಯ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನೀರಾವರಿ ನಿಗಮ ನಿಯಮಿತ

ಪ್ರತಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ:

1. ವಿಶೇಷಾಧಿಕಾರಿಗಳು, ವಿ.ಜೆ.ಎನ್.ಎಲ್, ನೋಂದಾಯಿತ ಕಛೇರಿ ಬೆಂಗಳೂರು.
2. ಮುಖ್ಯ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು, ವಿ.ಜೆ.ಎನ್.ಎಲ್, ಕೇಂದ್ರ ಕಛೇರಿ ಚಿತ್ರದುರ್ಗ.
3. ಪ್ರಧಾನ ವ್ಯವಸ್ಥಾಪಕರು–ಹಣಕಾಸು, ಕನೀನಿ, ಬೆಂಗಳೂರು
4. ಕಂಪನಿ ಕಾರ್ಯದರ್ಶಿಗಳು, ಕನೀನಿ,ಬೆಂಗಳೂರು
5. ಅಧೀಕ್ಷಕ ಇಂಜನಿಯರ, ಕನೀನಿ, ನೋ.ಕಛೇರಿ, ಬೆಂಗಳೂರು
6. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿಗಳು. ಕನೀನಿ.